ಅವನು ಮಕ್ಕಳಾದರೆ ಅವಕ್ಕೆ ಎಲ್ಲಿಂದ ತಂದು ಹಾಕುವುದು? ನಮ್ಮ ವಂಶ ಇಲ್ಲಿಗೇ ನಿಂತು ಹೋದರೆ ಅಳುವವರು ಯಾರೂ ಇಲ್ಲ. ಇಷ್ಟಕ್ಕೂ ನಮ್ಮದೇನು ರಾಜವಂಶವೇ ಎಂದು ಅವಳನ್ನು ಸಮಾಧಾನಪಡಿಸುತ್ತಿದ್ದ. ಅವಳನ್ನು ತನ್ನ ಹರವಾದ ಎದೆಯಲ್ಲಿ ಹುದುಗಿಸಿ ಸಂತೈಸುತ್ತಿದ್ದ. ಅವಳ ಮಡಿಲಲ್ಲಿ ತಲೆ ಇಟ್ಟು ನಾನೇ ನಿನ್ನ ಮಗು! ಲಾಲಿ ಹಾಡು ಎನ್ನುತ್ತಿದ್ದ. ಅವಳು ಅವನ ಗುಂಗುರು ಕೂದಲುಗಳ ಎಡೆಯಲ್ಲಿ ಕೈಯಾಡಿಸಿ ಇವನಂಥದ್ದೇ ಒಂದು ಮಗು ಕೊಡು ಎಂದು ಅಲ್ಲಾನನ್ನು ಬೇಡುತ್ತಿದ್ದಳು. ಅವಳಿಗೆ ಮನೆಯಲ್ಲಿ ಒಂಟಿತನ ಕಾಡುವಾಗ ಒಂದು ಮಗು ಬೇಕೆನಿಸುತ್ತಿತ್ತು. ಅವಳದನ್ನು ಪಕ್ಕದ ಬೂಬಮ್ಮಜ್ಜಿ ಜೊತೆ ಹಂಚಿಕೊಂಡಿದ್ದಳು. ಬೂಬಮ್ಮಜ್ಜಿ, 'ಅಲ್ಲಾ ಪರವರ್ದಿಗಾರ್ ಕೊಡುವಾಗ ಬಾಚಿ ಕೊಡುತ್ತಾನೆ. ನಾನು ಭರ್ತಿ ಹನ್ನೆರಡು ಹೆತ್ತಿಲ್ವೇ? ಏನೋ ಸ್ವಲ್ಪ ತಡ ಅಷ್ಟೇ. ಅವಸರ ಪಡಬೇಡ ಮಗಾ. ಅಲ್ಲಾ ಎಲ್ಲವನ್ನೂ ನೋಡುತ್ತಾನೆ. ಆದರೆ, ಕಾಯುತ್ತಾನೆ' ಎಂದು ಸಮಾಧಾನಪಡಿಸಿದ್ದಳು. ಈಗ ಬೂಬಮ್ಮಜ್ಜಿಯೂ ಇಲ್ಲ. ಕೊರೊನಾದಿಂದಾಗಿ ಒಂದು ವಾರದ ಹಿಂದೆ ತೀರಿಕೊಂಡಿದ್ದಾಳೆ. ತಾನಿನ್ನು ಯಾರಲ್ಲಿ ದುಃಖ ಹಂಚಿಕೊಳ್ಳುವುದು? ಗಂಡನ ಅಪ್ಪ ಅಮ್ಮ ಎಂದೋ ತೀರಿಹೋಗಿದ್ದಾರೆ. ಅವನಿಗೆ ಸೋದರ ಸೋದರಿಯರಿಲ್ಲ. ತನ್ನ ತಂದೆ ತಾಯಿ ನೂರು ಕಿಲೋಮೀಟರು ದೂರದಲ್ಲಿದ್ದಾರೆ. ಹೇಳಿಕೊಳ್ಳಲು ಇಲ್ಲಿ ಇರುವವನೊಬ್ಬನೇ. ಅಲ್ಲಾ ಪರವರ್ದಿಗಾರ್! ಗಂಡನಿಗೆ ಈವರೆಗೆ ಏನೂ ಬಂದಿರಲಿಲ್ಲ. ಒಂದು ಶೀತ, ಒಂದು ಕೆಮ್ಮು, ಒಂದು ಜ್ವರ, ಒಂದು ಕೈನೋವು, ಒಂದು ಕಾಲು ನೋವು, ಒಂದು ತಲೆನೋವು, ಒಂದು ಹೊಟ್ಟೆನೋವು. ಬೆಳಗ್ಗೆ ಎರಡು ಚಪಾತಿ, ರಾತ್ರಿ ಮೂರು ಪೂರಿ. ಮಧ್ಯಾಹ್ನ ಏನೂ ತೆಗೆದುಕೊಳ್ಳುತ್ತಿರಲಿಲ್ಲ. ಆದರೂ ದೃಢಕಾಯನಾಗಿಯೇ ಇದ್ದ. ಲಾಕ್‌ಡೌನ್ ಆದ ಮೇಲೆ ವ್ಯಾಪಾರ ಕುಸಿಯಿತು. ಮನೆಗೆ ರೇಷನ್ನು ತರೋದೇ ಕಷ್ಟವಾಯಿತು. ಒಮ್ಮೊಮ್ಮೆ ಲಾಠಿ ಏಟು ತಿಂದು ಬರುತ್ತಿದ್ದವನ ಮೀನಖಂಡಗಳ ಮೇಲಿನ ಲಾಠಿ ಗುರುತುಗಳಿಗೆ ಎಣ್ಣೆ ಹಚ್ಚಿ ಅವಳು ಶಾಖ ಕೊಡುವಾಗ ಅವನು ಸಣ್ಣ ದನಿಯಲ್ಲಿ ಚೀರುತ್ತಿದ್ದ. ಅವಳಿಗೆ ಆಗ ದೇವರ ಮೇಲೆ ಸಿಟ್ಟು ಬರುತ್ತಿತ್ತು. ಹೊಟ್ಟೆ ಕೊಟ್ಟವನು ಅದನ್ನು ತುಂಬಿಸುವ ಮಾರ್ಗಕ್ಕೆ ಕಲ್ಲು ಹಾಕುತ್ತಿದ್ದಾನಲ್ಲಾ?

ಇಂದು ಅವನನ್ನು ಆಸ್ಪತ್ರೆಗೆ ಸೇರಿಸದಿದ್ದರೆ ಶಾಶ್ವತವಾಗಿ ಕೈತಪ್ಪಿ ಹೋಗಬಹುದು. ಯಾವ ಆಸ್ಪತ್ರೆಗೆ ಸೇರಿಸುವುದು? ಅಲ್ಲಿ ಸೇರಿಸಿಕೊಳ್ಳುತ್ತಾರೋ ಇಲ್ಲವೋ? ಇನ್ನೆಷ್ಟು ಕೇಳುತ್ತಾರೋ? ಅವನು ಹೂ ಮಾರುವಾಗ ಹಾಕುವ ಮೂರು ಲುಂಗಿ, ಮೂರು ಪೈರಾನು ನಿನ್ನಿನ ಬೆಂಕಿಯಲ್ಲಿ ಸುಟ್ಟು ಹೋಗಿದೆ. ಇನ್ನುಳಿದದ್ದು ಸೂಟುಕೇಸಿನಲ್ಲಿರುವ ಬಿಳಿಪಂಚೆ, ಬಿಳಿ ಪೈರಾನು ಮತ್ತು ಬಿಳಿ ಟೊಪ್ಪಿ. ಶುಕ್ರವಾರ ಮಸೀದಿಗೆ ಹೋಗುವಾಗ ಅವನ್ನು ಅವನು ಹಾಕಿಕೊಂಡರೆ ಒಳ್ಳೆ ಸಿನಿಮಾ ನಟನ ಹಾಗೆ ಕಾಣುತ್ತಿದ್ದ. ಇರುವೊಂದು ಒಳ್ಳೆಯ ಡ್ರೆಸ್ಸನ್ನು ಹಾಕಿಕೊಂಡು ಹೂ ಮಾರಲಿಕ್ಕೆ ಹೋಗಲಾಗುತ್ತದೆಯೇ? ಛೇ! ಮನೆ ಸುಟ್ಟವರು ಎಂಥಾ ಸಂಕಷ್ಟ ತಂದಿತ್ತರು?

ಅವಳಿಗೆ ತನ್ನ ಮತ್ತು ತನ್ನ ಹಾಗಿರುವ ನೂರಾರು ಜನರ ಮನೆಗಳನ್ನು ಸುಟ್ಟದ್ದು ಯಾಕೆ ಎಂದು ಗೊತ್ತಿರಲಿಲ್ಲ. ಹೊರಗಿನ ಸಮಾಚಾರ ಅವಳಿಗೆ ಗೊತ್ತಾಗುತ್ತಿದ್ದದ್ದು ಗಂಡನಿಂದ. ಅವನೇ ಜ್ವರದಿಂದ ಕಂಗಾಲಾಗಿ ಪ್ರಜ್ಞೆ ಕಳಕೊಂಡು ಮಲಗಿದ್ದಾನೆ. ಅಂಥ ಸಮಯದಲ್ಲಿ ಆ ಸೈತಾನನ ಮಕ್ಕಳು ಗುಂಪುಗುಂಪಾಗಿ ಬಂದರು. ಕಿಟಿಕಿ ಬಾಗಿಲುಗಳನ್ನು ದೊಣ್ಣೆಗಳಿಂದ ಬಡಿದು ಮುರಿದರು. ಕೈಗೆ ಸಿಕ್ಕಿದ್ದನ್ನು ದೋಚಿದರು. ಆಮೇಲೆ ಕಂಡ ಕಂಡದ್ದಕ್ಕೆಲ್ಲಾ ಬೆಂಕಿ ಹಚ್ಚುತ್ತಾ ಹೋದರು. ಬೆಂಕಿ ಧಗ ಧಗ ಉರಿವಾಗ ಅವಳಿಗೆ ಗಂಡ ಅದರಲ್ಲಿ ದಹಿಸಿಹೊಗುತ್ತಾನೆ ಎಂದು ಖಚಿತವಾಯಿತು. ಉರಿಯುತ್ತಿರುವ ಆ ಬೆಂಕಿಗೆ ತಾನು ಹಾರಿದರೇನು ಎಂಬ ಆಲೋಚನೆ ಮೂಡಿತು. ಬೆಂಕಿಯಿಂದ ಶರೀರ ಹೊತ್ತಿಕೊಂಡು ಉರಿಯುವಾಗ ಅದನ್ನು ಸಹಿಸಲು ತನ್ನಿಂದ ಸಾಧ್ಯವೇ ಎಂದು ಅವಳು ತನ್ನನ್ನೇ